**OS. No. 125/2024** **PW –1**

ಪ್ರಮಾಣೀಕರಿಸಲಾದ ದಿನಾಂಕಃ **30.07.2026**

ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ. **MSR** ವಕೀಲರಿಂದಃ

1. ನಾನು ಈ ಹಿಂದೆ ಪ್ರತಿವಾದಿಯ ವಿರುದ್ಧ ಕ್ರಿಮಿನಲ್ ಪ್ರಕರಣದಾಖಲು ಮಾಡಿದ್ದೆ ಎಂದರೆ ಸರಿ. ಅದು ಸಿಸಿ ಸಂ. 41/2022 ಎಂದರೆ ಇರಬಹುದು. ಸದರಿ ಪ್ರಕರಣ ಇದೇ ನ್ಯಾಯಾಲಯದಲ್ಲಿ ನಡೆದು ಆರೋಪಿ ಬಿಡುಗಡೆಯಾಗಿರುತ್ತಾರೆ ಎಂದರೆ ಸರಿ. ಸದರಿ ಪ್ರಕರಣ ಈಗ ಉಚ್ಚ ನ್ಯಾಯಾಲಯದಲ್ಲಿ ಬಾಕಿ ಇರುತ್ತದೆ ಸದರಿ ದಾಖಲೆಯನ್ನು ನಾನು ಹಾಜರುಪಡಿಸಿರುತ್ತೇನೆ ಎಂದರೆ ಸರಿ. ಅದೇ ಪ್ರಕರಣವನ್ನು ಈಗ ಸಿವಿಲ್ ರೂಪದಲ್ಲಿ ಹಾಕಿರುತ್ತೇನೆ ಎಂದರೆ ಸರಿ.
2. ಪ್ರತಿವಾದಿಯು ನಮ್ಮ ಕುಟುಂಬಕ್ಕೆ 5-6 ವರ್ಷಗಳಿಂದ ಬಹಳ ಆತ್ಮೀಯರು ಎಂದರೆ ಸರಿ. ನಾನು ಎಷ್ಟು ವರ್ಷದಿಂದ ಬಡ್ಡಿ ವ್ಯವಹಾರ ಮಾಡುತ್ತಿದ್ದೇನೆ ಎಂದರೆ 6-7 ವರ್ಷಗಳಿಂದ ವಿಶ್ವಾಸದಲ್ಲಿ ಕೊಡುವುದು ತೆಗೆದುಕೊಳ್ಳುವುದು ಮಾಡುತ್ತೇನೆ. ಬರಶಿಡ್ಲೇಹಳ್ಳಿ ಪ್ರಾಂತ್ಯದಲ್ಲಿ ನಾನು ಬಡ್ಡಿ ವ್ಯವಹಾರ ಮಾಡುತ್ತೇನೆ ಎಂದರೆ ವಿಶ್ವಾಸದಲ್ಲಿ ಕೊಡುತ್ತೇನೆ. ನಾನು ಬಡ್ಡಿ ವ್ಯವಹಾರ ಮಾಡಲು ಲೈಸೆಂನ್ಸ್ ಪಡೆದಿರುವುದಿಲ್ಲ ಬಡ್ಡಿ ವ್ಯವಹಾರ ಮಾಡುವುದಿಲ್ಲ.
3. ನಾನು ಪ್ರತಿವಾದಿಗೆ ನಗದು ರೂಪದಲ್ಲಿಯೇ ಹಣ ನೀಡಿರುತ್ತೇನೆ. ನಾನು ದಿಃ 25.06.2021 ರಂದು ಹಣ ನೀಡಿದ್ದೆ. ಅದಕ್ಕೂ ಪೂರ್ವದಲ್ಲಿಯೇ ನಾನು ಹಣ ನೀಡಿದ್ದೆ ಎಂದರೆ ಪಡೆದುಕೊಂಡಿದ್ದರು ಅದನ್ನು ವಾಪಸ್ಸು ನೀಡಿದ್ದರು ಎಂದು ನುಡಿದಿರುತ್ತಾರೆ. ನಾನು ಹಿಂದೆ ನೀಡಿದ್ದ ಹಣವನ್ನು ಪ್ರತಿವಾದಿ ಪೂರ್ತಿ ಮರುಪಾವತಿ ಮಾಡಿದ್ದರು. ಪ್ರತಿವಾದಿಯು ಬೇರೆ ವ್ಯವಹಾರಕ್ಕೆ ನನ್ನನ್ನು ಜೊತೆಯಲ್ಲಿ ಕರೆದುಕೊಂಡು ಹೋಗುತ್ತಿದ್ದರು ಎಂದರೆ ಸರಿಯಲ್ಲ. ನನ್ನಮಗ ಮತ್ತು ಪ್ರತಿವಾದಿ ತುಂಬಾ ಆತ್ಮೀಯರು ಎಂದರೆ ಆತ್ಮೀಯತೆ ಇರುವುದಿಲ್ಲ ವಿಶ್ವಾಸ ಇರುತ್ತದೆ ಎಂದು ನುಡಿಯುತ್ತಾರೆ. ಚೆಕ್ ಅಲ್ಲಿ ರೂ. 3 ಲಕ್ಷ ಹಣ ಬರೆದಿತ್ತು. ನನ್ನ ಸಮಕ್ಷಮವೇ ಬರೆದು ಸಹಿ ಮಾಡಿರುತ್ತಾರೆ. ವಿಶ್ವಾಸದಲ್ಲಿ ಬೇರೆ ವ್ಯವಹಾರಕ್ಕೆ ನೀಡಿದ ಚೆಕ್ಕನ್ನು ದುರುಪಯೋಗ ಪಡಿಸಿಕೊಂಡು ಈ ದಾವೆ ದಾಖಲು ಮಾಡಿರುತ್ತೇನೆ ಎಂದರೆ ಸರಿಯಲ್ಲ. ಪ್ರತಿವಾದಿ ನನ್ನ ಬಳಿ ಲಕ್ಷಾಂತರ ರೂಪಾಯಿ ವ್ಯವಹಾರ ಮಾಡಿರುವುದಿಲ್ಲ ಎಂದರೆ ಸರಿಯಲ್ಲ.
4. ನನಗೆ ಅಡಿಕೆ, ತೆಂಗಿನ ಕಾಯಿ ಹಾಗೂ ನನ್ನ ಮಕ್ಕಳು ಖಾಸಗಿ ಕೆಲಸಕ್ಕೆ ಹೋಗುತ್ತಾರೆ ಆ ಮೂಲಕ ಆದಾಯ ಇರುತ್ತದೆ. ನಾನು ಹಾಜರುಪಡಿಸಿರುವ ಪಹಣಿ ಪತ್ರಿಕೆಯ ಜಮೀನಿನಲ್ಲಿ ಲಕ್ಷಾಂತರ ರೂಪಾಯಿ ಆದಾಯ ಇಲ್ಲ ಎಂದರೆ ಸರಿಯಲ್ಲ. ನಮ್ಮ

ಮನೆಯಲ್ಲಿ ಹಣಕಾಸಿನ ಎಲ್ಲಾ ವ್ಯವಹಾರವನ್ನು ನನ್ನ ಮಗ ಮಾಡುತ್ತಾನೆ ನಾನು ಯಾವುದೇ ಹಣಕಾಸಿನ ವ್ಯವಹಾರ ಮಾಡುವುದಿಲ್ಲ ಎಂದರೆ ಸರಿಯಲ್ಲ.

5. ಹಿಂದೆ ಪ್ರತಿವಾದಿಯೊಡನೆ ವ್ಯವಹಾರವಾಗಿದ್ದು ಅದಕ್ಕೆ ಜಾಸ್ತಿ ಬಡ್ಡಿಯನ್ನು ಕೇಳಿರುತ್ತೇನೆ ಎಂದರೆ ಸರಿಯಲ್ಲ. ನನಗೆ ಬರಬೇಕಾದ ಪೂರ್ತಿ ಹಣ ನನಗೆ ಸೇರಿರುತ್ತದೆ, ಬರಬೇಕಾದ ಸ್ವಲ್ಪ ಪ್ರಮಾಣದ ಬಡ್ಡಿ ಹಣಕ್ಕಾಗಿ ಈ ದಾವೆ ದಾಖಲು ಮಾಡಿರುತ್ತೇನೆ ಎಂದರೆ ಸರಿಯಲ್ಲ. ಈ ಹಿಂದೆ ದಾಖಲಾದ ಚೆಕ್ ಬೌನ್ಸ್ ಪ್ರಕರಣದಲ್ಲಿ ಪೊಲೀಸರವರ ಮುಖಾಂತರ ಬಂದು ಎಲ್ಲಾ ವ್ಯವಹಾರವನ್ನು ಬಗೆಹರಿಸಿರುತ್ತಾರೆ ಎಂದರೆ ಸರಿಯಲ್ಲ. ಆರೋಪಿಯಿಂದ ಕೇವಲ ಒಂದೇ ಚೆಕ್ಕನ್ನು ಪಡೆಯಲಾಗಿರುತ್ತದೆ. ಪ್ರತಿವಾದಿಯಿಂದ ನಾನು ಖಾಲಿ ಚೆಕ್ಕನ್ನು ಪಡೆದಿರುತ್ತೇನೆ. ಎಂದರೆ ಸರಿಯಲ್ಲ. ನನಗೆ ಇಂಗ್ಲೀಷ್ ಓದಲು ಬರೆಯಲು ಬರುವುದಿಲ್ಲ. ಹಣಕಾಸಿನ ವ್ಯವಹಾರ ಮುಗಿದಿದ್ದರೂ ಹೆಚ್ಚಿನ ಹಣ ಪಡೆಯಬೇಕು ಎಂಬ ಉದ್ದೇಶದಿಂದ ಈ ದಾವೆಯನ್ನು ದಾಖಲು ಮಾಡಲಾಗಿದೆ ಎಂದರೆ ಸರಿಯಲ್ಲ.

<u>ಮರು ವಿಚಾರಣೆಃ ಇರುವುದಿಲ್ಲ.</u>

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚಿಸಿದೆ)

ಓ.ಹೇ.ಕೇ.ಸರಿ ಇದೆ

ಸಹಿ/-
ಪ್ರಧಾನ ಸಿವಿಲ್ ನ್ಯಾಯಾಧೀಶರು, ಚಿ.ನಾ.ಹಳ್ಳಿ